# ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಉತ್ತಮ ಆಡಳಿತದ ಅಗತ್ಯತೆ

ಈಶ್ವರಪ್ಪ[1] & ಕೃಷ್ಣಪ್ಪ ಜಿ. ನಿಂಬಕ್ಕನವರ್[2]

[1]ಸಂಶೋಧನಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಕೆ.ಎಸ್.ಓ.ಯು. (ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ), ಮೈಸೂರು.

[2]ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕೆ.ಎಸ್.ಓ.ಯು. (ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ), ಮೈಸೂರು.

DOI: https://doi.org/10.5281/zenodo.18850809

## ABSTRACT:

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸ್ವಾತಂತ್ರ್ಯ ನಂತರದ ತರುವಾಯ ಈ ಪ್ರದೇಶದ ಹಿಂದುಳಿದಿರುವಿಕೆಯನ್ನು ಕಂಡುಕೊಳ್ಳಲು ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರ ಹಲವಾರು ಸಮಿತಿಗಳನ್ನು ರಚಿಸಿದ್ದು ಅವುಗಳಲ್ಲಿ ಡಾ. ಡಿ ಎಂ ನಂಜುಂಡಪ್ಪ ಮತ್ತು ಎಂ ಗೋವಿಂದ ರಾವ್ ಸಮಿತಿಗಳು ಹಲವಾರು ಅಂಕಿ ಸಂಖ್ಯೆಗಳ ಮೂಲಕ ಈ ಪ್ರದೇಶವು ಇನ್ನೂ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಕಂಡುಕೊಂಡಿವೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಮತ್ತು ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಕರ್ನಾಟಕ ಸರಕಾರವು ಹಲವಾರು ಅಭಿವೃದ್ಧಿ ಯೋಜನೆಗಳು, ವಿಶೇಷ ಅನುದಾನಗಳನ್ನು ಬಳಸಿಕೊಂಡಿರುತ್ತದೆ. ತದನಂತರದಲ್ಲಿ ಡಾ. ಡಿ ಎಂ ನಂಜುಂಡಪ್ಪ ಸಮಿತಿಯ ವರದಿ ಅನ್ವಯ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇಷ್ಟೆಲ್ಲ ಅಭಿವೃದ್ಧಿ ಯೋಜನೆಗಳು ಖರ್ಚು ವೆಚ್ಚಗಳನ್ನು ಮಾಡಿದರೂ ಸಹ ಈ ಪ್ರದೇಶದ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಆಗಲಿಲ್ಲ. ಆ ಕಾರಣದಿಂದಾಗಿ 2014ರಲ್ಲಿ 371 ಜೆ ವಿಧಿಯನ್ನು ಸಂವಿಧಾನಬದ್ಧವಾಗಿ ಅನುಷ್ಠಾನಗೊಳಿಸಲಾಗಿದ್ದು, ಈ ಅನುಚ್ಛೇದ ಅಡಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ರಚಿಸಲಾಗಿದ್ದು ಮತ್ತು ಈ ಪ್ರದೇಶದ ಜನರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಅವಕಾಶಗಳನ್ನು ಕಲ್ಪಿಸಲಾಗಿದೆ. ಇಷ್ಟೆಲ್ಲ ಅಭಿವೃದ್ಧಿ ಯೋಜನೆಗಳು ಖರ್ಚು ವೆಚ್ಚಗಳನ್ನು ಮಾಡಿದರೂ ಸಹ ಈ ಪ್ರದೇಶದ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಆಗಲಿಲ್ಲ. ಈ ಕಾರಣಗಳಿಂದಾಗಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಉತ್ತಮ ಆಡಳಿತವು ಮಾರ್ಗೋಪಾಯವಾಗಿದೆ.

## KEYWORDS:

ಕಲ್ಯಾಣ ಕರ್ನಾಟಕ, ಪ್ರಾದೇಶಿಕ ಅಸಮತೋಲನ, ವಿಶೇಷ ಅಭಿವೃದ್ಧಿ ಯೋಜನೆ, 371 ಜೆ ವಿಧಿ, ಉತ್ತಮ ಆಡಳಿತ.

**ಪೀಠಿಕೆ:**

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸ್ವಾತಂತ್ರ್ಯ ನಂತರದ ತರುವಾಯ ಈ ಪ್ರದೇಶದ ಹಿಂದುಳಿದಿರುವಿಕೆಯನ್ನು ಕಂಡುಕೊಳ್ಳಲು ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರ ಹಲವಾರು ಸಮಿತಿಗಳನ್ನು ರಚಿಸಿದ್ದು ಅವುಗಳಲ್ಲಿ ಡಾ. ಡಿ ಎಂ ನಂಜುಂಡಪ್ಪ ಮತ್ತು ಎಂ ಗೋವಿಂದ ರಾವ್ ಸಮಿತಿಗಳು ಹಲವಾರು ಅಂಕಿ ಸಂಖ್ಯೆಗಳ ಮೂಲಕ ಈ ಪ್ರದೇಶವು ಇನ್ನೂ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಕಂಡುಕೊಂಡಿವೆ.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಮತ್ತು ಪ್ರಾದೇಶಿಕ ಅಸಮತೋಲನವನ್ನು

ಕಡಿಮೆ ಮಾಡಲು ಕರ್ನಾಟಕ ಸರಕಾರವು ಹಲವಾರು ಅಭಿವೃದ್ಧಿ ಯೋಜನೆಗಳು, ವಿಶೇಷ ಅನುದಾನಗಳನ್ನು ಬಳಸಿಕೊಂಡಿರುತ್ತದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ 1990 ದಶಕದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಗಿದ್ದು, ಈ ಮಂಡಳಿಯ ಮೂಲಕ 1991 ರಿಂದ 2014ರ ವರೆಗೆ ಕೋಟ್ಯಂತರ ರೂಪಾಯಿಯನ್ನು ಈ ಪ್ರದೇಶದ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ. ತದನಂತರದಲ್ಲಿ ಡಾ. ಡಿ ಎಂ ನಂಜುಂಡಪ್ಪ ಸಮಿತಿಯ ವರದಿ ಅನ್ವಯ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು ಈ ಅಭಿವೃದ್ಧಿ ಯೋಜನೆ ಮೂಲಕ 2013 ರಿಂದ ಇದುವರೆಗೂ 24,780 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು 14000 ಕೋಟಿ ವೆಚ್ಚ ಮಾಡಲಾಗಿದೆ.

ಈವರೆಗಿನ ಯೋಜನೆಗಳೆಲ್ಲ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬಂದಿದ್ದಲ್ಲಿ ಕಲ್ಯಾಣ ಕರ್ನಾಟಕ ನಂದನದ ತುಣುಕಾಗಿ ಬದಲಾಗುತ್ತಿತ್ತು ಹಾಗೂ ದೇಶಕ್ಕೇ ಮಾದರಿ ಆಗುತ್ತಿತ್ತು. ರಾಜಕೀಯ ಪ್ರಾತಿನಿಧ್ಯದ ಮಾನದಂಡದಿಂದ ನೋಡಿದರೂ, ಈ ಭಾಗದ ಇಬ್ಬರು ನಾಯಕರು ಮುಖ್ಯಮಂತ್ರಿಗಳಾಗಿದ್ದಾರೆ. ಹಲವು ನಾಯಕರು ಕೇಂದ್ರ ರಾಜಕಾರಣದಲ್ಲೂ ಅವಕಾಶ ಪಡೆದಿದ್ದಾರೆ. ಇದೆಲ್ಲದರಿಂದ ಆಗಿರುವುದಾದರೂ ಏನು? ನಗರ ಪ್ರದೇಶಗಳಲ್ಲಿನ ಅಲ್ಪಸ್ವಲ್ಪ ಅಭಿವೃದ್ಧಿಯನ್ನು ಹೊರತುಪಡಿಸಿದರೆ ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿಯೇ ಇವೆ. ಕುಡಿಯುವ ಶುದ್ಧನೀರು, ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಗುಣಮಟ್ಟದ ಸರ್ಕಾರಿ ಶಾಲೆಗಳು ಕಲ್ಯಾಣ ಕರ್ನಾಟಕದ ಗ್ರಾಮೀಣರಿಗೆ ಐಷಾರಾಮಿಯಾಗಿಯೇ ಉಳಿದಿವೆ.

ಇಷ್ಟೆಲ್ಲ ಅಭಿವೃದ್ಧಿ ಯೋಜನೆಗಳು ಖರ್ಚು ವೆಚ್ಚಗಳನ್ನು ಮಾಡಿದರೂ ಸಹ ಈ ಪ್ರದೇಶದ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಆಗಲಿಲ್ಲ. ಆ ಕಾರಣದಿಂದಾಗಿ 2014ರಲ್ಲಿ 371 ಜೆ ವಿಧಿಯನ್ನು ಸಂವಿಧಾನಬದ್ಧವಾಗಿ ಅನುಷ್ಠಾನಗೊಳಿಸಲಾಗಿದ್ದು, ಈ ಅನುಚ್ಛೇದ ಅಡಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ರಚಿಸಲಾಗಿದ್ದು ಮತ್ತು ಈ ಪ್ರದೇಶದ ಜನರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಅವಕಾಶಗಳನ್ನು ಕಲ್ಪಿಸಲಾಗಿದ್ದು, ಇದರ ಮೂಲಕ ಪ್ರತಿ ವರ್ಷ ಕರ್ನಾಟಕ ಸರ್ಕಾರವು 500 ಕೋಟಿಗಿಂತ ಹೆಚ್ಚು ಹಣವನ್ನು ವ್ಯಯ ಮಾಡುತ್ತಿದೆ. ಇಷ್ಟೆಲ್ಲ ಅಂಕಿ ಸಂಖ್ಯೆಗಳ ಖರ್ಚು ವೆಚ್ಚಗಳು ಆಗಿದ್ದರೂ ಈ ಪ್ರದೇಶ ಇನ್ನು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಕಂಡುಕೊಂಡಿಲ್ಲ ಎಂಬುವುದನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರಕ್ಕೆ ವರದಿ ನೀಡಿರುವ ಎಂ ಗೋವಿಂದ್ ರಾವ್ ಸಮಿತಿ ಇದರ ಹಿಂದುಳಿಯುವಿಕೆಗೆ ಕಾರಣಗಳನ್ನು ಕಂಡುಕೊಂಡಿದೆ. ಈ ಎಲ್ಲ ಕಾರಣಗಳಿಂದಾಗಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಉತ್ತಮ ಮಾರ್ಗೋಪಾಯವೆಂದರೆ ಉತ್ತಮ ಆಡಳಿತವನ್ನು ವ್ಯವಸ್ಥಿತವಾಗಿ ಜಾರಿಗೊಳಿಸುವುದು ಇದರಿಂದ ಈ ಪ್ರದೇಶದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದಾಗಿದೆ.

**ಸಂಶೋಧನಾ ಅಧ್ಯಯನದ ಉದ್ದೇಶಗಳು:**

ಸಂಶೋಧನಾ ಅಧ್ಯಯನದ ಪ್ರಮುಖ ಉದ್ದೇಶಗಳೆಂದರೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ರಚಿಸಲಾಗಿರುವ ವಿವಿಧ ಸಮಿತಿಗಳ ವರದಿಗಳ ವಿಶ್ಲೇಷಣೆ ಮಾಡುವುದು, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಉತ್ತಮ ಆಡಳಿತದ ಅವಶ್ಯಕತೆಯನ್ನು ಕುರಿತು ವಿಶ್ಲೇಷಿಸುವುದು. ಈ ಪ್ರದೇಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ

ಕ್ರಮಗಳು, ಅನುಷ್ಠಾನದ ಕ್ರಿಯಾ ಯೋಜನೆ ಮತ್ತು ನ್ಯೂನತೆಗಳನ್ನು ವಿಶ್ಲೇಷಿಸುವುದು. ಈ ಪ್ರದೇಶದ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಪ್ರಗತಿಯನ್ನು ಅಂಕಿ-ಅಂಶಗಳ ಮೂಲಕ ತಿಳಿಯುವುದು.

**ಅಧ್ಯಯನದ ವಿಧಾನ:**

ಮಾಧ್ಯಮಿಕ ಮೂಲಗಳ ಮೂಲಕ ನನ್ನ ಸಂಶೋಧನಾ ಲೇಖನಕ್ಕೆ ಸಂಬಂಧಿಸಿದಂತೆ, ಗ್ರಂಥಾಲಯಗಳಲ್ಲಿ ಲಭ್ಯವಿರುವ ಪ್ರಕಟಿತ ಗ್ರಂಥಗಳು, ವರದಿಗಳು, ಟಿಪ್ಪಣಿಗಳು, ವಿದ್ವಾಂಸರುಗಳಿಂದ ಬರೆಯಲ್ಪಟ್ಟ ಪುಸ್ತಕಗಳು, ಪಿ.ಹೆಚ್.ಡಿ ಮಹಾಪ್ರಬಂಧಗಳು, ಸಂಶೋಧನಾ ವರದಿಗಳು, ಭಾರತ ಮತ್ತು ಕರ್ನಾಟಕ ಸರ್ಕಾರಗಳ ಆರ್ಥಿಕ ಸಮೀಕ್ಷಾ ವರದಿಗಳು, ಜಿಲ್ಲಾವಾರು ಗೆಜೆಟಿಯರ್‌ಗಳು, ಕರ್ನಾಟಕ ಸರ್ಕಾರದ ಸುತ್ತೋಲೆಗಳು, ಕೈಪಿಡಿಗಳು, ನಿಯತಕಾಲಿಕೆಗಳು, ಮಾಸಪತ್ರಿಕೆಗಳು, ತ್ರೈಮಾಸಿಕ ಪತ್ರಿಕೆಗಳು, ಅಂತರ್ಜಾಲ ಮೊದಲಾದುವುಗಳನ್ನು ಸಂಶೋಧನಾ ಲೇಖನದಲ್ಲಿ ಬಳಸಿಕೊಂಡಿರುತ್ತೇನೆ.

**ಸಾಹಿತ್ಯ ಪರಾಮರ್ಶೆ:**

ಕೆ.ಎಲ್.ಲೋಕನಾಥ್ (2013), "ಅನುಚ್ಛೇದ 371(ಜೆ) ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳು: ಮಾಹಿತಿ ಪುಸ್ತಕ" ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು. ಈ ಪುಸ್ತಕದಲ್ಲಿ ಅನುಚ್ಛೇದ 371(ಜೆ) ಕಲಂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ವಿವರಣೆಯಿದೆ; ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಮೀಸಲಾತಿ) ಆದೇಶ-2013. ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ-2013, ಕರ್ನಾಟಕ ಖಾಸಗಿ ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ (ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ-2013. ಸ್ಥಳೀಯ ವೃಂದ ರಚಿಸುವ ಬಗ್ಗೆ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಿದ ಮಾರ್ಗಸೂಚಿಗಳು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ತಿದ್ದುಪಡಿ ಆದೇಶ-2013, 371 (ಜೆ) ಕಲಂ ಅನುಷ್ಠಾನಕ್ಕೆ ಸಂಬಂಧಿಸಿದ ಕೇಂದ್ರ-ರಾಜ್ಯ ಸರ್ಕಾರಗಳ ನಿಯಮಗಳು ಈ ಪುಸ್ತಕದಲ್ಲಿ ಕಂಡು ಬರುತ್ತವೆ.

ಡಾ.ಶಾಲಿನಿ ರಜನೀಶ್, ಡಾ. ಛಾಯಾ ದೇವಗಾವಕರ್ ಮತ್ತು ಶ್ರೀಮತಿ ಸಂಗೀತ ಕಟ್ಟಿಮನಿ (2014), "ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಯಲ್ಲಿ 371(ಜೆ) ಸಮನ್ವಯ ಪ್ರಗತಿ" ಪ್ರಸಾರಾಂಗ, ಕಲಬುರಗಿ (ಗುಲ್ಬರ್ಗಾ) ವಿಶ್ವವಿದ್ಯಾಲಯ. ಈ ಪುಸ್ತಕವು ಸಂಶೋಧನಾ ಅಧ್ಯಯನಕ್ಕೆ ಅತ್ಯುತ್ತಮ ಅಧ್ಯಯನ ಸಾಮಗ್ರಿಯಾಗಿದ್ದು, ಹೈದರಾಬಾದ್ ಕರ್ನಾಟಕ ಪ್ರದೇಶದ ಪ್ರತಿ ಜಿಲ್ಲೆಯಲ್ಲಿನ ಪ್ರಾಥಮಿಕ ಮೂಲಭೂತ ಸೌಲಭ್ಯಗಳಾದ; ಶಿಕ್ಷಣ, ಆರೋಗ್ಯ, ನೀರಾವರಿ, ಉದ್ಯೋಗ, ಜನಸಂಖ್ಯೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಕೃಷಿ, ರೇಷ್ಮೆ, ಪಶುಸಂಗೋಪನೆ ಮತ್ತು ತೋಟಗಾರಿಕೆ, ವಾಣಿಜ್ಯದಂತಹ ಅಂಶಗಳ ಕುರಿತು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳ ಅಂಕಿ-ಅಂಶಗಳೊಂದಿಗೆ ತುಲನಾತ್ಮಕವಾದ ಅಧ್ಯಯನ ಈ ಪುಸ್ತಕದಲ್ಲಿ ಕಂಡುಬರುತ್ತದೆ.

ಡಾ.ಡಿ.ಎಂ.ನಂಜುಂಡಪ್ಪ ವರದಿ-2002, ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನಮಂಡಲ, ವಿಧಾನಸೌಧ ಬೆಂಗಳೂರು. ಪ್ರಾದೇಶಿಕ ಅಸಮತೋಲನವನ್ನು ಅಧ್ಯಯನ ಮಾಡಿ ಮಾರ್ಗೋಪಾಯಗಳನ್ನು ಸೂಚಿಸಲು ಅಂದಿನ ಮುಖ್ಯಮಂತ್ರಿ ಶ್ರೀ.ಎಸ್.ಎಂ.

ಕೃಷ್ಣರವರ ನೇತೃತ್ವದ ಸರ್ಕಾರ 2000ನೇ ವರ್ಷದ ಡಿಸೆಂಬರ್ ತಿಂಗಳಲ್ಲಿ ಕರ್ನಾಟಕದ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಡಿ.ಎಂ.ನಂಜುಂಡಪ್ಪರವರ ಅಧ್ಯಕ್ಷತೆಯಲ್ಲಿ "ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ"ಯನ್ನು ನೇಮಿಸಿತು. ಅದು ತನ್ನ ಅಂತಿಮ ವರದಿಯನ್ನು 2002ನೇ ವರ್ಷದ ಜೂನ್ ತಿಂಗಳಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಈ ಸಮಿತಿಯು ಸಮಗ್ರ ಕರ್ನಾಟಕದ ಪ್ರತಿಯೊಂದು ಜಿಲ್ಲೆಗಳನ್ನು ವಿವಿಧ ಆಯಾಮಗಳಲ್ಲಿ ತುಲನಾತ್ಮಕವಾಗಿ ಅಧ್ಯಯನ ಮಾಡಿ, ಅಂಕಿ-ಅಂಶಗಳಾಗಿ ಯಾವ ಜಿಲ್ಲೆಗಳು ಹಿಂದುಳಿದಿವೆ? ಅಂದರೆ ಎಲ್ಲಿ ನಗರ ಅಸಮತೋಲನ ಎದ್ದುಕಾಣುತ್ತದೆ, ಅವುಗಳಿಗೆ ಕಾರಣಗಳೇನು ಮತ್ತು ಮಾರ್ಗೋಪಾಯಗಳೇನು ಎಂಬುದರ ಕುರಿತು ಸ-ವಿವರವಾದ ಮಾಹಿತಿಯೊಂದಿಗೆ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು.

ಸಾರ್ವಜನಿಕ ಮತ್ತು ಖಾಸಗಿ ಆಡಳಿತ ವಲಯದಲ್ಲಿ ಉತ್ತಮ ಆಡಳಿತ ಎಂಬ ಪರಿಕಲ್ಪನೆ ಇತ್ತೀಚೆಗೆ ಹೆಚ್ಚು ಪ್ರಚಲಿತದಲ್ಲಿದೆ. ಸಾಂಪ್ರದಾಯಿಕವಾಗಿ ಸಾರ್ವಜನಿಕ ಆಡಳಿತ ಎಂಬ ಪದ ಸಾರ್ವಜನಿಕ ವ್ಯವಹಾರದ ನಿರ್ವಹಣೆಯನ್ನು ಸೂಚಿಸುತ್ತದೆ. ಅದು ಸರಕಾರದ ಕ್ರಿಯಾ ವಿಭಾಗವಾಗಿದೆ. ಆದರೆ 1970ರ ದಶಕದ ಮಧ್ಯಭಾಗದಲ್ಲಿ "ನಿರ್ವಹಣೆ" ಎಂಬ ಪರಿಕಲ್ಪನೆ ಉದ್ಯಮ ಆಡಳಿತದಲ್ಲಿ ಮೂಡಿಬಂತು. 1990ರ ದಶಕದಲ್ಲಿ ನಿರ್ವಹಣೆ ಎಂಬ ಪರಿಕಲ್ಪನೆ ಕೂಡ ತನ್ನ ವೈಭವವನ್ನು ಕಳೆದುಕೊಂಡು ಈಗ "ಉತ್ತಮ ಆಡಳಿತ" [Good Governance] ಎಂಬ ನವ ಪರಿಕಲ್ಪನೆ ಸಾರ್ವಜನಿಕ ಆಡಳಿತ ವಲಯದಲ್ಲಿ ಹೆಚ್ಚು ಹೆಚ್ಚು ಪ್ರಸಿದ್ಧಿ ಪಡೆಯುತ್ತಿದೆ. ಸಾರ್ವಜನಿಕ ವ್ಯವಹಾರಗಳನ್ನು ನಿಭಾಯಿಸುವ ಹೊಸ ದೃಷ್ಟಿಕೋನ ಇದಾಗಿದ್ದು ನಾಗರಿಕರಿಗೆ ಉನ್ನತ ಗುಣಮಟ್ಟದ ಸೇವೆ ಒದಗಿಸುವ ಭರವಸೆ ನೀಡುತ್ತದೆ.

ಉತ್ತಮ ಆಡಳಿತ (Good Governance) ಎಂದರೆ ಪಾರದರ್ಶಕತೆ, ಹೊಣೆಗಾರಿಕೆ, ಕಾನೂನಿನ ಆಡಳಿತ ಮತ್ತು ಜನರ ಭಾಗವಹಿಸುವಿಕೆಯ ಮೂಲಕ ಸಾರ್ವಜನಿಕ ಸೇವೆಗಳನ್ನು ದಕ್ಷತೆಯಿಂದ ಒದಗಿಸುವ ಪ್ರಕ್ರಿಯೆ. ಇದು ಭ್ರಷ್ಟಾಚಾರ ರಹಿತ, ನ್ಯಾಯಯುತ ಮತ್ತು ನಾಗರಿಕರ ಕಲ್ಯಾಣವನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ತಂತ್ರಜ್ಞಾನದ ಬಳಕೆಯೊಂದಿಗೆ (ಇ-ಆಡಳಿತ) ಸೇವೆಗಳನ್ನು ಒದಗಿಸುವುದಾಗಿದೆ.

ಉತ್ತಮ ಆಡಳಿತವು ಒಂದು ವಿಶಿಷ್ಟವಾದ ಆಡಳಿತ ವ್ಯವಸ್ಥೆಯಾಗಿದೆ. ಅದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ದಕ್ಷ ಮತ್ತು ಪರಿಣಾಮಕಾರಿಯಾದ ಆಡಳಿತವನ್ನು ಪ್ರತಿಪಾದಿಸುತ್ತದೆ. ಅದು ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ, ಬದ್ಧತೆ ಹೊಂದಿರುವ ಅಭಿವೃದ್ಧಿ ಪರ ಆಡಳಿತವಾಗಿದೆ. ಇಲ್ಲಿ ಉನ್ನತಮಟ್ಟದ ಸಾಂಸ್ಥಿಕ ಪರಿಣಾಮಕತ್ವ ಇರುತ್ತದೆ. ಅಂದರೆ ಇಲ್ಲಿ ಹೆಚ್ಚಿನ ದಕ್ಷತೆ ಸಾಧಿಸಲು, ನ್ಯಾಯಸಮ್ಮತತೆ ಮತ್ತು ವಿಶ್ವಾಸಾರ್ಹತೆ ಸಾಧಿಸಲು ಹೊಸ ಆಡಳಿತ ಮೌಲ್ಯಗಳನ್ನು ಅಳವಡಿಸಲಾಗುತ್ತದೆ.

ಉತ್ತಮ ಆಡಳಿತವು ಒಂದು ರಾಷ್ಟ್ರ ರಾಜ್ಯವ್ಯವಸ್ಥೆಗೆ ಸಂಬಂಧಿಸಿದ್ದು ಅದು ತನ್ನ ಜನರ ಜೀವನವನ್ನು ಶಾಂತಿಯುತ, ಕ್ರಮಬದ್ಧವಾದ, ಸಮಂಜಸವಾದ, ಅಭಿವೃದ್ಧಿಯುತ, ಪಾಲುಗೊಳ್ಳುವಿಕೆಯ ವಿಧಾನವಾಗಿ ನೋಡಿಕೊಳ್ಳುತ್ತದೆ. ಹಾಗಾಗಿ ಉತ್ತಮ ಆಡಳಿತವು ಈ ಕೆಳಗಿನ ಮುಖ್ಯ ಗುರಿಗಳನ್ನು ಹೊಂದಿರುತ್ತದೆ. ಪರಿಣಾಮಕಾರಿ ಮತ್ತು ದಕ್ಷ ಆಡಳಿತವನ್ನು ಹೆಚ್ಚಿಸುವುದು, ಜನರ ಜೀವನ ಗುಣಮಟ್ಟವನ್ನು ಸುಧಾರಿಸುವುದು, ಸಂಸ್ಥೆಗಳ ನ್ಯಾಯಪರತೆ ಮತ್ತು ವಿಶ್ವಾಸಾರ್ಹತೆಯನ್ನು ಸ್ಥಾಪಿಸುವುದು, ಆಡಳಿತವನ್ನು ನಾಗರಿಕ ಸ್ನೇಹಿ, ಪ್ರತಿಕ್ರಿಯಶಾಲಿ ಮತ್ತು ನಾಗರಿಕ ಕಾಳಜಿಯ ಸಂಸ್ಥೆಯನ್ನಾಗಿ ಪರಿವರ್ತಿಸುವುದು. ಹೊಣೆಗಾರಿಕೆಯನ್ನು

ಖಚಿತಪಡಿಸುವುದು.

ಮಾಹಿತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ, ಆಡಳಿತದ ವೆಚ್ಚವನ್ನು ತಗ್ಗಿಸುವುದು, ಪ್ರತಿಯೊಂದು ಇಲಾಖೆಯನ್ನು ಫಲಿತಾಂಶ ಆಧಾರಿತವಾಗಿ ರೂಪಿಸುವುದು. ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಸುಧಾರಿಸುವುದು, ಉದ್ಯೋಗಿಗಳ ಉತ್ಪಾದನಾ ಸಾಮರ್ಥ್ಯವನ್ನು ಸುಧಾರಿಸುವುದು, ಭ್ರಷ್ಟಾಚಾರವನ್ನು ಹೋಗಲಾಡಿಸಿ ಸರಕಾರದ ವಿಶ್ವಾಸಾರ್ಹತೆಯನ್ನು ಪುನರ್ ಸ್ಥಾಪಿಸುವುದು. ಕ್ರಮರಾಹಿತ್ಯ ಆಡಳಿತ ಚಲಾವಣೆಯನ್ನು ತಡೆಗಟ್ಟುವುದು ಮತ್ತು ನಾಗರಿಕ–ಸರಕಾರ ಮುಖಾಮುಖಿ ಸಂಪರ್ಕಕ್ಕಾಗಿ ಮಾಹಿತಿ ತಂತ್ರಜ್ಞಾನ ಸೇವೆಯನ್ನು ಸುಧಾರಿಸುವುದು.

ಕರ್ನಾಟಕವು ಕ್ರಿಸ್ತಶಕ 1956 ನವೆಂಬರ್ ಒಂದರಂದು ವಿಶಾಲ ಮೈಸೂರು ರಾಜ್ಯ ಎಂಬ ನಾಮಾಂಕಿತದೊಂದಿಗೆ ಉದಯವಾಯಿತು. ನಂತರ ಕ್ರಿಸ್ತಶಕ 1973 ರಲ್ಲಿ ನವೆಂಬರ್ ಒಂದರಂದು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ನೇತೃತ್ವದ ಸರಕಾರವು ಕರ್ನಾಟಕ ಎಂದು ನಾಮಕರಣ ಮಾಡಿತು. ಇತ್ತೀಚಿಗೆ ಅಂದರೆ 2019 ಸೆಪ್ಟೆಂಬರ್ 17ರಂದು ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ವೆಂದು ಪುನಃ ನಾಮಕರಣ ಮಾಡಿ ಸರ್ಕಾರವು ಆದೇಶ ಹೊರಡಿಸಿತು (18–19ನೇ ಶತಮಾನದಲ್ಲಿ ಈ ಪ್ರದೇಶವು ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದರಿಂದ ಈ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಎಂದು ಕರೆಯಲು ಕಾರಣವಾಗಿತ್ತು ).

ಕಲ್ಯಾಣ ಕರ್ನಾಟಕವು ಪ್ರಸ್ತುತ ಏಳು ಜಿಲ್ಲೆಗಳನ್ನು ಒಳಗೊಂಡಿದೆ ಅವುಗಳೆಂದರೆ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ. ಕರ್ನಾಟಕದ ಉತ್ತರದ ಈಶಾನ್ಯ ಭಾಗದಲ್ಲಿರುವ ಕಲ್ಯಾಣ ಕರ್ನಾಟಕ ಪ್ರದೇಶವು ಪೂರ್ವಕ್ಕೆ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಮತ್ತು ತೆಲಂಗಾಣದ ನಿಜಾಮಾಬಾದ್ ಜಿಲ್ಲೆ, ಪಶ್ಚಿಮಕ್ಕೆ ಗದಗ, ಹಾವೇರಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು, ಉತ್ತರ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಕಲ್ಯಾಣ ಕರ್ನಾಟಕವು ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ ಹೊಂದಿದ್ದು ,

ಈ ಪ್ರದೇಶವು ಹೈದರಾಬಾದಿನೊಡನೆ ಹೊಂದಿರುವ ನಂಟು ಮತ್ತು ಗಂಟುಗಳು ತುಂಬಾ ಶಿಥಿಲವಾಗುತ್ತಾ ಕಣ್ಮರೆಯಾಗುತ್ತಿದ್ದರೂ ಅದೇ ಹೆಸರಿನಿಂದ ಕರೆಯಲ್ಪಡುತ್ತಿರುವ ಕಾರಣದಿಂದಾಗಿ ಈ ಪ್ರದೇಶವನ್ನು 2019ರಲ್ಲಿ ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ದಲಿತ ಮತ್ತು ಹಿಂದುಳಿದ ವರ್ಗಗಳ ವ್ಯಾಪಕ ಕರ್ಮಭೂಮಿ, ವಚನ ಸಾಹಿತ್ಯ ದಾಸ ಸಾಹಿತ್ಯಗಳ ಸಿರಿ ಫಸಲು, ಭಕ್ತಿ ಮತ್ತು ಆಧ್ಯಾತ್ಮಗಳ ವಿಶೇಷ ಅರಿವು, ದೇಹ ಮತ್ತು ಪರಿಶ್ರಮಕ್ಕೆ ಪರ್ಯಾಯ ಹೆಸರಾಗಿರುವ ಕಷ್ಟ ಸಹಿಷ್ಣು ರೈತಾಪಿ ಜನಾಂಗ, ಮಣ್ಣನ್ನು ಚಿನ್ನ ಮಾಡುವ ಸಾಹಸಶೀಲತೆ ಜೊತೆಗೆ ಪ್ರಾಮಾಣಿಕ ಮುಗ್ಧತೆಯ ನೆಲೆಬೀಡಾಗಿದ್ದರೂ, ಈ ಪ್ರದೇಶ ಇಲ್ಲಿನ ರಾಜಕೀಯ ನಾಯಕರ, ಸಮಾಜದ ಮುಖಂಡರ ಹಾಗೂ ಆಳಿದ ವಿವಿಧ ಸರ್ಕಾರಗಳ ಉದಾಸೀನದ ಕಾರಣದಿಂದಾಗಿ ಇಂದು ಕರ್ನಾಟಕದ ಅತ್ಯಂತ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಳಚಲು ಸಾಧ್ಯವಾಗುತ್ತಿಲ್ಲ.

ಈ ಏಳು ಜಿಲ್ಲೆಗಳು ಮಾನವ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದು 2023–24 ರ ಮಾನವ ಅಭಿವೃದ್ಧಿ ವರದಿ, 2023–24ರ ಸಾಲಿನ ಕರ್ನಾಟಕ ಆರ್ಥಿಕ ಸಮೀಕ್ಷೆ

ಮುಂತಾದವುಗಳ ಅಂಕಿ ಅಂಶಗಳಿಂದ ರುಜುವಾತಾಗಿದೆ. ಪ್ರತಿ ವರ್ಷ ಸರ್ಕಾರದ ಬಜೆಟಿನ ಘೋಷಣೆ ಅನುಸಾರ ಕಾರ್ಯಕ್ರಮಗಳನ್ನು ಯಥಾವತ್ತಾಗಿ ಜಾರಿಗೊಳಿಸದಿರುವುದು ಮತ್ತು ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆ, ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವುದು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲರಾಗಿರುವುದೇ ಈ ಪ್ರದೇಶ ಇನ್ನೂ ಹಿಂದುಳಿದಿರಲು ಪ್ರಮುಖ ಕಾರಣವಾಗಿದೆ.

ಪ್ರಗತಿಪರ ರಾಜ್ಯವಾಗಿರುವ ಕರ್ನಾಟಕದಲ್ಲಿ ಅಭಿವೃದ್ಧಿ ವಿಷಯ ಬಂದಾಗ ಮೂರು ಕರ್ನಾಟಕ ಸ್ಪಷ್ಟವಾಗಿ ಕಂಡುಬರುತ್ತವೆ. ಅಭಿವೃದ್ಧಿ ಹೊಂದಿದ ದಕ್ಷಿಣ ಕರ್ನಾಟಕ, ಹಿಂದುಳಿದ ಉತ್ತರ ಕರ್ನಾಟಕ ಮತ್ತು ಅತ್ಯಂತ ಹಿಂದುಳಿದ ಕಲ್ಯಾಣ ಕರ್ನಾಟಕ ಎಂಬುದಕ್ಕೆ ಸ್ಪಷ್ಟ ನಿರ್ದೇಶನ ಕರ್ನಾಟಕ ರಾಜ್ಯದ 2023–24 ನೇ ಸಾಲಿನ ಮಾನವ ಅಭಿವೃದ್ಧಿಯ ವರದಿಯಲ್ಲಿ ಕಂಡುಬರುತ್ತದೆ.

2023–24 ರ ಮಾನವ ಅಭಿವೃದ್ಧಿ ವರದಿ ಪ್ರಕಾರ ರಾಜ್ಯದ 30 ಜಿಲ್ಲೆಗಳಲ್ಲಿ ಕಲ್ಯಾಣ ಕರ್ನಾಟಕದ ಯಾದಗಿರಿ 30ನೇ ಸ್ಥಾನ, ಕಲಬುರಗಿ 29ನೇ ಸ್ಥಾನ ಮತ್ತು 28ನೇ ಸ್ಥಾನದಲ್ಲಿರುವ ರಾಯಚೂರು ಈ ಮೂರು ಜಿಲ್ಲೆಗಳು ರಾಜ್ಯದಲ್ಲಿ ಕೊನೆಯ ಸ್ಥಾನದಲ್ಲಿವೆ.

2001 ಮಾನವ ಅಭಿವೃದ್ಧಿಯ ವರದಿ ಹಾಗೂ 2023–24ರ ಮಾನವ ಅಭಿವೃದ್ಧಿ ವರದಿ ಹೋಲಿಕೆ ಮಾಡಿದಾಗ ಈ ಜಿಲ್ಲೆಗಳು ಮಾನವ ಅಭಿವೃದ್ಧಿಯಲ್ಲಿ ಅಲ್ಪ ಪ್ರಮಾಣದ ಪ್ರಗತಿಯನ್ನು ಮಾತ್ರ ಸಾಧಿಸಿರುವುದು ಕಂಡುಬರುತ್ತದೆ.

2001 ರಲ್ಲಿ ರಾಯಚೂರು ಜಿಲ್ಲೆ 0.547, ಕಲಬುರಗಿ ಜಿಲ್ಲೆ 0.564 ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೊಂದಿದ್ದರೆ, 2023–24 ರ ವರದಿಯಲ್ಲಿ ರಾಯಚೂರು 0.562, ಕಲಬುರಗಿ 0.539 ಹಾಗೂ ಯಾದಗಿರಿ 0.538 ಸೂಚ್ಯಂಕವನ್ನು ಹೊಂದಿರುತ್ತದೆ. ಮಾನವ ಅಭಿವೃದ್ಧಿಯ ಮುಖ್ಯ ಸಂಕೇತಗಳಾದ ಶಿಕ್ಷಣ, ಆರೋಗ್ಯ, ಆದಾಯದ ಮಟ್ಟದಲ್ಲಿ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳು ಕೊನೆಯ ಸ್ಥಾನದಲ್ಲಿವೆ. ಈ ಪ್ರದೇಶದ ಅಭಿವೃದ್ಧಿಗಾಗಿ ಸರಕಾರಗಳು ವಿಶೇಷ ಅನುದಾನ ಒದಗಿಸುತ್ತವೆ, ಹಲವು ವಿಶೇಷ ಯೋಜನೆಗಳು ಹಮ್ಮಿಕೊಳ್ಳಲಾಗಿದೆ. ಮುಂದುವರೆದು 2014 ರಲ್ಲಿ 371 (J) ಅನುಚ್ಛೇದವನ್ನು ಅಳವಡಿಸುವುದರ ಮೂಲಕ ಈ ಪ್ರದೇಶದ ಅಭಿವೃದ್ಧಿಗೆ ವಿಶೇಷ ಗಮನಹರಿಸಲಾಗಿದೆ. ಈ ಪ್ರದೇಶದಲ್ಲಿ 371(J) ಅನುಚ್ಛೇದ ಅನುಷ್ಠಾನಗೊಂಡು ದಶಕಗಳಾದರೂ ಮಾನವ ಅಭಿವೃದ್ಧಿಯಲ್ಲಿ ಗಮನಾರ್ಹ ಪ್ರಗತಿ ಕಂಡು ಬಂದಿರುವುದಿಲ್ಲ.

ಕಲ್ಯಾಣ ಕರ್ನಾಟಕದಲ್ಲಿ ಸಾಕ್ಷರತೆ, ಶಿಶು ಮರಣ ಪ್ರಮಾಣ, ಜೀವಿತಾವಧಿ, ಆದಾಯದ ಅಸಮಾನತೆ ವ್ಯತ್ಯಾಸ ಇರುವುದು ಸ್ಪಷ್ಟವಾಯಿತು. ಈ ವರದಿ ಮಾನವ ಅಭಿವೃದ್ಧಿ ಸುಧಾರಣೆಗಾಗಿ ಅನುಸರಿಸಬೇಕಾದ ಮಾರ್ಗದರ್ಶನ, ಉನ್ನತಾಧಿಕಾರ ಸಮಿತಿಗಳ (ಉದಾ. ನಂಜುಂಡಪ್ಪ ಸಮಿತಿ) ಶಿಫಾರಸುಗಳ ಅನುಷ್ಠಾನ ಕುರಿತಾಗಿ ಸಲಹೆಗಳನ್ನು ಒದಗಿಸಿತು.

1999 ಮತ್ತು 2005 ರಲ್ಲಿ ಸಿದ್ಧಪಡಿಸಲಾದ ಅಭಿವೃದ್ಧಿ ವರದಿಗಳು (KHDR), ರಾಯಚೂರನ್ನು ಇಡೀ ರಾಜ್ಯದಲ್ಲಿ ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿದ ಜಿಲ್ಲೆ ಮತ್ತು ದೇವದುರ್ಗವನ್ನು ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿದ ತಾಲ್ಲೂಕು ಎಂದು ಹೆಸರಿಸಿದೆ.

ತಲಾ ಆದಾಯದಲ್ಲಿ ಕಲ್ಯಾಣ ಕರ್ನಾಟಕ ತುಂಬಾ ಹಿಂದೆ. ಇಡೀ ದೇಶದಲ್ಲಿ ಕರ್ನಾಟಕದ ತಲಾ ಆದಾಯದಲ್ಲಿ ಮುಂಚೂಣಿ ಸ್ಥಾನದಲ್ಲಿದೆ. ಆದರೆ, ರಾಜ್ಯದಲ್ಲಿ ದಕ್ಷಿಣದ

ಜಿಲ್ಲೆಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಜಿಲ್ಲೆಗಳ ತಲಾ ಆದಾಯ ತುಂಬಾ ಹಿಂದಿದೆ. ಬೆಂಗಳೂರಿನ ತಲಾ ಆದಾಯ ₹6 ಲಕ್ಷ ಆದಾಯ ಇದ್ದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ₹1.30 ಲಕ್ಷ ಇದೆ.

ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯು 2002ರಲ್ಲಿ ಕರ್ನಾಟಕದ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸಿತು. ಸಮಿತಿಯು ರಾಜ್ಯದ ಜಿಲ್ಲೆಗಳು, ತಾಲೂಕುಗಳ ನಡುವಿನ ಅಭಿವೃದ್ಧಿ ಅಸಮಾನತೆಯನ್ನು ಕಂಡುಹಿಡಿಯಲು ರಚಿಸಲ್ಪಟ್ಟಿತು. 114 ಹಿಂದುಳಿದ ತಾಲೂಕುಗಳನ್ನು ಗುರುತಿಸಿ, ಅವುಗಳಿಗೆ 8 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಯೋಜನೆ ಮತ್ತು ನೀಲ ನಕ್ಷೆಯನ್ನು ಸಿದ್ಧಪಡಿಸಲಾಯಿತು. ಪ್ರಮುಖ ಶಿಫಾರಸುಗಳು: ರಾಜ್ಯದ ಹಿಂದುಳಿದ ತಾಲೂಕುಗಳಿಗೆ ವಾರ್ಷಿಕವಾಗಿ ₹2,000 ಕೋಟಿ ಅನುದಾನ ನೀಡುವುದು; ಒಟ್ಟು ₹16,000 ಕೋಟಿ (ಬಜೆಟ್‌ನ 92% ತಲುಪುವಂತೆ). ಕೃಷಿ, ನೀರಾವರಿ, ಹಸುಗಳು, ರೇಷ್ಮೆ ಉದ್ಯಮ, ತೋಟಗಾರಿಕೆ, ಕಾರ್ಮಿಕ ಶಕ್ತಿ ಮುಂತಾದ ಕ್ಷೇತ್ರಗಳಲ್ಲಿ ಹೂಡಿಕೆ. ತಾಲೂಕುಗಳನ್ನು ಅತ್ಯಂತ ಹಿಂದುಳಿದ (39), ಹಿಂದುಳಿದ, ಸಾಪೇಕ್ಷ ಮುಂದುವರಿದ ಎಂದು ವರ್ಗೀಕರಿಸಿ ಯೋಜನೆ ರೂಪಿಸುವುದು. ಅನುಷ್ಠಾನ ಸ್ಥಿತಿ: 2007ರಿಂದ ಅನುಷ್ಠಾನ ಆರಂಭ; ₹43,000 ಕೋಟಿ ಖರ್ಚು ಮಾಡಲಾಗಿದೆ. ಆದರೂ, 39 ಅತ್ಯಂತ ಹಿಂದುಳಿದ ತಾಲೂಕುಗಳು 40 ಆಗಿವೆ; ಸಾಪೇಕ್ಷ ಮುಂದುವರಿದವುಗಳು 61ರಿಂದ 66 ಆಗಿವೆಯಷ್ಟೇ.

ಪ್ರಾದೇಶಿಕ ಅಸಮತೋಲನದ ನಿವಾರಣೆಗಾಗಿ ವಿವಿಧ ಸರ್ಕಾರಗಳ ಅವಧಿಯಲ್ಲಿ ಹಲವು ಯೋಜನೆಗಳು ಜಾರಿಗೆ ಬಂದಿವೆ. ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯಂತೆ 'ವಿಶೇಷ ಅಭಿವೃದ್ಧಿ ಯೋಜನೆ' ಜಾರಿಗೊಳಿಸಲಾಗಿದೆ. ಸಂವಿಧಾನದ 371 ಜೆ ಕಲಂನಡಿ 'ಕಲ್ಯಾಣ ಕರ್ನಾಟಕ'ಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದ್ದು, 'ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ' ರೂಪುಗೊಂಡಿದೆ. ಪ್ರಸ್ತುತ 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ' ಎಂದು ಕರೆಯಲಾಗುವ ಈ ಮಂಡಳಿಗೆ, 2013ರಿಂದ ಇದುವರೆಗೆ ಒಟ್ಟು ₹24,780 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ₹14,000 ಕೋಟಿ ವೆಚ್ಚ ಮಾಡಲಾಗಿದೆ. ಕಲಬುರಗಿಯಲ್ಲಿ ಕಳೆದ ವರ್ಷ ನಡೆದ ಸಚಿವ ಸಂಪುಟದ ಸಭೆಯಲ್ಲಿ ₹11,770 ಕೋಟಿ ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಈವರೆಗಿನ ಯೋಜನೆಗಳೆಲ್ಲ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬಂದಿದ್ದಲ್ಲಿ ಕಲ್ಯಾಣ ಕರ್ನಾಟಕ ನಂದನದ ತುಣುಕಾಗಿ ಬದಲಾಗುತ್ತಿತ್ತು ಹಾಗೂ ದೇಶಕ್ಕೇ ಮಾದರಿ ಆಗುತ್ತಿತ್ತು. ರಾಜಕೀಯ ಪ್ರಾತಿನಿಧ್ಯದ ಮಾನದಂಡದಿಂದ ನೋಡಿದರೂ, ಈ ಭಾಗದ ಇಬ್ಬರು ನಾಯಕರು ಮುಖ್ಯಮಂತ್ರಿಗಳಾಗಿದ್ದಾರೆ. ಹಲವು ನಾಯಕರು ಕೇಂದ್ರ ರಾಜಕಾರಣದಲ್ಲೂ ಅವಕಾಶ ಪಡೆದಿದ್ದಾರೆ. ಇದೆಲ್ಲದರಿಂದ ಆಗಿರುವುದಾದರೂ ಏನು? ನಗರ ಪ್ರದೇಶಗಳಲ್ಲಿನ ಅಲ್ಪಸ್ವಲ್ಪ ಅಭಿವೃದ್ಧಿಯನ್ನು ಹೊರತುಪಡಿಸಿದರೆ ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿಯೇ ಇವೆ. ಕುಡಿಯುವ ಶುದ್ಧನೀರು, ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಗುಣಮಟ್ಟದ ಸರ್ಕಾರಿ ಶಾಲೆಗಳು ಕಲ್ಯಾಣ ಕರ್ನಾಟಕದ ಗ್ರಾಮೀಣರಿಗೆ ಐಷಾರಾಮಿಯಾಗಿಯೇ ಉಳಿದಿವೆ.

ಆದರೆ ಈ ಬದಲಾವಣೆಗಳಿರುವ ಹೊರತಾಗಿಯೂ ಈ ಪ್ರದೇಶವು ಇನ್ನೂ ಹಿಂದುಳಿದಿದೆ ಎಂಬ ಆರೋಪಗಳಾಗಿವೆ ಮತ್ತು ಒಟ್ಟು ನಿರೀಕ್ಷಿತ ಅನುದಾನಗಳು ನೀಡಲಾಗುತ್ತಿಲ್ಲ ಎನ್ನುವುದು ಸಹ ಇದೆ. ಈ ವಿಧಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ

ವಿವಾದಗಳು ಮತ್ತು ಸವಾಲುಗಳು ಸಹ ಕಂಡುಬರುತ್ತವೆ. ಅಳವಡಿಕೆಯಲ್ಲಿ ಆಡಳಿತಾತ್ಮಕ ವಿಳಂಬ, ಮೀಸಲು ಅಸ್ಥಿರತೆ, ಕೆಲವು ಜಾತಿ/ವರ್ಗಗಳಿಗೆ ಮಾತ್ರ ಲಾಭದಾಯಕವಾಗಿರುವುದು ಮತ್ತು ಕೊನೆಯವರೆಗೆ ಸಮರ್ಪಕ ಅಭಿವೃದ್ಧಿಯತ್ತ ಚಾಲನೆ ಇಲ್ಲ ಎಂಬ ವಿಶ್ಲೇಷಣೆಗಳು ಇತ್ತೀಚಿನ ಅಧ್ಯಯನಗಳಲ್ಲಿ ಕಾಣಿಸುತ್ತಿವೆ.

ಪ್ರೊ.ಡಿ.ಎಂ. ನಂಜುಂಡಪ್ಪ ನೇತೃತ್ವದ ಅಸಮತೋಲನ ಕುರಿತ ಸಮಿತಿಯ ವರದಿಯಲ್ಲಿದ್ದ ಹಿಂದುಳಿದ ತಾಲ್ಲೂಕುಗಳ ಸ್ಥಿತಿಗತಿ ಪರಿಶೀಲನೆಗಾಗಿ ರಚನೆಯಾದ ಎಂ. ಗೋವಿಂದರಾವ್ ಅಧ್ಯಕ್ಷತೆಯ 'ಪ್ರಾದೇಶಿಕ ಅಸಮತೋಲನ ನಿವಾರಣೆ ಸಮಿತಿ'ಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಂತಿಮ ವರದಿ ಸಲ್ಲಿಸಿದೆ. ನಂಜುಂಡಪ್ಪ ಸಮಿತಿ ವರದಿ ಆಧರಿಸಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಅನುದಾನ ಹಂಚಿಕೆಯಾದರೂ ಸಾಕಷ್ಟು ಸಮರ್ಪಕವಾಗಿ ಬಳಕೆಯಾಗದ ಕಾರಣ ಸ್ಥಿತಿಗತಿ ಸುಧಾರಣೆಯಾಗದಿರುವುದನ್ನು ಸಮಿತಿ ಪತ್ತೆ ಹಚ್ಚಿದೆ.

ನಂಜುಂಡಪ್ಪ ಸಮಿತಿ ಗುರುತಿಸಿದ್ದ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಪ್ರಮಾಣ ಎರಡು ದಶಕಗಳ ಬಳಿಕ ಶೇ 65ರಿಂದ ಶೇ 72.8ಕ್ಕೆ ಹೆಚ್ಚಳವಾಗಿರುವ ಆತಂಕಕಾರಿ ಸಂಗತಿ ಬಯಲಾಗಿದೆ. ರಾಜ್ಯದಲ್ಲಿನ ಒಟ್ಟು 59 ಅತಿ ಹಿಂದುಳಿದ ತಾಲ್ಲೂಕುಗಳ ಪೈಕಿ ಕಲಬುರಗಿ ಕಂದಾಯ ವಿಭಾಗದ 39 ಹಾಗೂ ಬೆಳಗಾವಿ ವಿಭಾಗದ 20 ತಾಲ್ಲೂಕುಗಳು ಅತಿ ಹಿಂದುಳಿದಿವೆ. ಇವೆಲ್ಲವೂ ಉತ್ತರ ಕರ್ನಾಟಕ ಭಾಗದಲ್ಲಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಹಿಂದುಳಿಯುವಿಕೆ ಮತ್ತು ಯಥಾಸ್ಥಿತಿಯ ಮುಂದುವರಿಕೆ ಕುರಿತಂತೆ ಬಹು ಆಯಾಮ ಮತ್ತು ಬಹು ಮಹತ್ವದ ಹಲವು ಪ್ರಶ್ನೆಗಳು 'ಉತ್ತರ ಇಲ್ಲದ' ಅಥವಾ 'ಉತ್ತರ ಒಲ್ಲದ' ಅಧಿಕಾರಸ್ಥರನ್ನು ಸುತ್ತುವರಿಯುತ್ತವೆ.

ಈ ಕಾರಣಗಳಿಂದಾಗಿ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಉತ್ತಮ ಆಡಳಿತವು ಮಾರ್ಗೋಪಾಯವಾಗಿದೆ. ಇದು ಸಾಮಾನ್ಯವಾಗಿ ಪಾರದರ್ಶಕತೆ, ಜವಾಬ್ದಾರಿ, ಸಮುದಾಯದ ಭಾಗವಹಿಸುವಿಕೆ ಮತ್ತು ದಕ್ಷತೆಯನ್ನು ಒಳಗೊಂಡಿರುತ್ತದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಲ್ಲಿ ಉತ್ತಮ ಆಡಳಿತದ ತತ್ವಗಳು ಜಾರಿಗೊಳ್ಳಬೇಕಾಗಿದೆ.

ಪಾರದರ್ಶಕತೆಯು ಉತ್ತಮ ಆಡಳಿತದ ಮೂಲತತ್ವವಾಗಿದ್ದು, ಕಲ್ಯಾಣ ಕರ್ನಾಟಕದಲ್ಲಿ ಈ ಪ್ರದೇಶದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ಎಲ್ಲಾ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳಿಗಾಗಿ ಖರ್ಚು ಮಾಡಲಾಗಿರುವ ವೆಚ್ಚಗಳು, ವೆಚ್ಚಗಳಿಗೆ ಸಂಬಂಧಿಸಿದಂತೆ ನಿರ್ಧಾರಗಳು ಮತ್ತು ಪ್ರಕ್ರಿಯೆಗಳು ಎಲ್ಲರಿಗೂ ತಿಳಿದಿರುವಂತೆ ಮಾಹಿತಿ ಬಹಿರಂಗಪಡಿಸುವುದು ಅವಶ್ಯಕವಾಗಿದೆ, ಉದಾ: ಇ–ಗವರ್ನೆನ್ಸ್ ಪೋರ್ಟಲ್‌ಗಳ ಮೂಲಕ.

ಜವಾಬ್ದಾರಿ ಮತ್ತು ಹೊಣೆಗಾರಿಕೆಯು ಉತ್ತಮ ಆಡಳಿತದ ಮತ್ತೊಂದು ಪ್ರಮುಖ ಮೂಲತತ್ವವಾಗಿದ್ದು, ಅಧಿಕಾರಿಗಳು ನಿರ್ಧಾರಗಳಿಗೆ ಉತ್ತರದಾಯಕರಾಗಿರುವುದು, ಉತ್ತರದಾಯಿ ಆಗಿರುವಂತೆ ನೋಡಿಕೊಳ್ಳುವುದು, ಇದನ್ನು ಲೆಕ್ಕಪರಿಶೋಧನಾ ಸಮಿತಿಗಳ ಮೂಲಕ ಮಾಡಬಹುದಾಗಿರುತ್ತದೆ.

ಸಮುದಾಯಗಳ ಭಾಗವಹಿಸುವಿಕೆ ಉತ್ತಮ ಆಡಳಿತದ ತತ್ವದಂತೆ ಈ ಭಾಗದ ಎಲ್ಲಾ ಸಮುದಾಯಗಳು, ನಾಗರಿಕ ಸಮಾಜಗಳು ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರ ಪಾಲ್ಗೊಳ್ಳುವಿಕೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಸಮುದಾಯದ ಭಾಗವಹಿಸುವಿಕೆ

ಹೊರತು ಯಾವುದೇ ಪ್ರದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಯೋಜನೆಗಳು, ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಾಗರಿಕರಿಂದ ಪ್ರತಿಕ್ರಿಯೆ ಸಂಗ್ರಹಿಸುವುದು, ಸಮೀಕ್ಷೆಗಳು ಮತ್ತು ಸಭೆಗಳ ಮೂಲಕ ಈ ಅಂಶವನ್ನು ಸಾಧಿಸಬಹುದಾಗಿದೆ.

ಆಡಳಿತ ಪ್ರಕ್ರಿಯೆಯಲ್ಲಿ ಜನರ ಸಹಭಾಗಿತ್ವ: ಉತ್ತಮ ಆಡಳಿತ ವ್ಯವಸ್ಥೆಯಲ್ಲಿ ಎಲ್ಲಾ ಪುರುಷರಿಗೆ ಹಾಗೂ ಮಹಿಳೆಯರಿಗೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ತಮ್ಮ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯವಿದೆ. ಈ ಅಭಿಪ್ರಾಯವನ್ನು ಜನರು ನೇರವಾಗಿ ಅಥವಾ ತಮ್ಮ ಹಿತಾಸಕ್ತಿಯನ್ನು ಪ್ರತಿನಿಧಿಸುವ ನ್ಯಾಯಬದ್ಧ ಮಧ್ಯವರ್ತಿ ಸಂಸ್ಥೆಗಳ ಮೂಲಕ ತಿಳಿಸಬಹುದು. ಇದಕ್ಕೆ ಅಭಿವ್ಯಕ್ತಿ ಮತ್ತು ಸಂಘಟನೆಗಳನ್ನು ರೂಪಿಸುವ ಸ್ವಾತಂತ್ರ್ಯವಿರಬೇಕು, ಅಲ್ಲದೆ ರಚನಾತ್ಮಕವಾಗಿ ಸರಕಾರದ ಆಡಳಿತದ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವಿರಬೇಕು. ದಕ್ಷತೆ: ಸಂಪನ್ಮೂಲಗಳ ಅತ್ಯುತ್ತಮ ಬಳಕೆ ಮತ್ತು ಸಕಾಲದಲ್ಲಿ ಸೇವೆಗಳ ವಿತರಣೆ. ಉತ್ತಮ ಆಡಳಿತವು ಭ್ರಷ್ಟಾಚಾರವನ್ನು ಕಡಿಮೆ ಮಾಡುತ್ತದೆ, ಮಾನವ ಹಕ್ಕುಗಳ ರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಉತ್ತಮ ಆಡಳಿತವು ಕೇವಲ ಆಡಳಿತವಲ್ಲ, ಅದು ಜನರ ಸೇವೆ ಮತ್ತು ಸುಸ್ಥಿರ ಅಭಿವೃದ್ಧಿಯ ಮೂಲಾಧಾರವಾಗಿದೆ.

ಇತ್ತೀಚಿಗೆ ಕರ್ನಾಟಕ ಸರ್ಕಾರವು 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ' ಸ್ಥಾಪನೆಗೆ ಕ್ರಮಕೈಗೊಂಡಿದೆ. 'ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಆಗದ ಹೊರತು ಸಂಪೂರ್ಣ ರಾಜ್ಯದ ಅಭಿವೃದ್ಧಿ ಅಸಾಧ್ಯ. ಈ ಭಾಗದ ಜನರ ತಲಾ ಆದಾಯ ಹೆಚ್ಚಿಸುವುದರೊಂದಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ, ಮೂಲ ಸೌಕರ್ಯ ಸುಧಾರಣೆ ಸೇರಿ ಸರ್ವಾಂಗೀಣ ಅಭಿವೃದ್ಧಿಯೇ ಸರ್ಕಾರದ ಗುರಿ ಆಗಬೇಕಾಗಿದೆ. 1948ರ ಸೆಪ್ಟೆಂಬರ್ 17ರಂದು ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದ ದಿನದಿಂದ ಇಂದಿನವರೆಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ದೊರೆತಿಲ್ಲ ಎನ್ನುವ ದೂರುಗಳು ಕೇಳಿಬರುತ್ತಲೇ ಇವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂದುಳಿದಿರುವಿಕೆ, ಬಾಲ್ಯವಿವಾಹಗಳ ಹೆಚ್ಚಳ, ಕೃಷಿ ವಲಯದ ಸಂಕಷ್ಟ, ವ್ಯಾಪಕ ಗುಳೆ ಸೇರಿದಂತೆ ಹಲವು ಸಮಸ್ಯೆಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ತತ್ತರಿಸುತ್ತಿವೆ. ದೇಶದ ಎರಡನೇ ಅತಿ ಶುಷ್ಕ ಪ್ರದೇಶ ಎಂದು ಗುರ್ತಿಸಲಾಗಿರುವ ಈ ಭಾಗವನ್ನು ಸುಧಾರಿಸುವ ಪ್ರಯತ್ನಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ.

**ಸಮಾರೋಪ:**

ಪರಿಣಾಮಕಾರಿ ಮತ್ತು ದಕ್ಷ ಆಡಳಿತವನ್ನು ಹೆಚ್ಚಿಸುವುದು, ಜನರ ಜೀವನ ಗುಣಮಟ್ಟವನ್ನು ಸುಧಾರಿಸುವುದು, ಸಂಸ್ಥೆಗಳ ನ್ಯಾಯಪರತೆ ಮತ್ತು ವಿಶ್ವಾಸಾರ್ಹತೆಯನ್ನು ಸ್ಥಾಪಿಸುವುದು, ಆಡಳಿತವನ್ನು ನಾಗರಿಕ ಸ್ನೇಹಿ, ಪ್ರತಿಕ್ರಿಯಶಾಲಿ ಮತ್ತು ನಾಗರಿಕ ಕಾಳಜಿಯ ಸಂಸ್ಥೆಯನ್ನಾಗಿ ಪರಿವರ್ತಿಸುವುದು. ಹೊಣೆಗಾರಿಕೆಯನ್ನು ಖಚಿತಪಡಿಸುವುದು, ಆಡಳಿತದ ವೆಚ್ಚವನ್ನು ತಗ್ಗಿಸುವುದು, ಪ್ರತಿಯೊಂದು ಇಲಾಖೆಯನ್ನು ಫಲಿತಾಂಶ ಆಧಾರಿತವಾಗಿ ರೂಪಿಸುವುದು. ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಸುಧಾರಿಸುವುದು, ಉದ್ಯೋಗಿಗಳ ಉತ್ಪಾದನಾ ಸಾಮರ್ಥ್ಯವನ್ನು ಸುಧಾರಿಸುವುದು, ಭ್ರಷ್ಟಾಚಾರವನ್ನು ಹೋಗಲಾಡಿಸಿ ಸರಕಾರದ ವಿಶ್ವಾಸಾರ್ಹತೆಯನ್ನು ಪುನರ್ ಸ್ಥಾಪಿಸುವುದು. ಕ್ರಮರಾಹಿತ್ಯ ಆಡಳಿತ ಚಲಾವಣೆಯನ್ನು ತಡೆಗಟ್ಟುವುದು ಮತ್ತು ನಾಗರಿಕ-ಸರಕಾರ ಮುಖಾಮುಖಿ ಸಂಪರ್ಕಕ್ಕಾಗಿ ಮಾಹಿತಿ

ತಂತ್ರಜ್ಞಾನ ಸೇವೆಯನ್ನು ಸುಧಾರಿಸುವುದು ಇದೇ ಮುಂತಾದ ಉತ್ತಮ ಆಡಳಿತದ ಪ್ರಕ್ರಿಯೆಗಳಿಂದ ಈ ಪ್ರದೇಶದ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ.

**ಪರಾಮರ್ಶನ ಗ್ರಂಥಗಳು:**


1. ಶಿವಾನಂದ.ಎಂ.ಜಾಮದಾರ (2016), ಉತ್ತರ ಕರ್ನಾಟಕದ ವಾಸ್ತವಾಂಶಗಳ ಒಂದು ನೋಟತಾರತಮ್ಯ, (ಮನೋಹರ ಗ್ರಂಥಮಾಲಾ, ಧಾರವಾಡ.)
2. ಶಾಲಿನಿ ರಜನೀಶ್, ಛಾಯಾ ದೇವಗಾವಂಕರ್ ಮತ್ತು ಶ್ರೀಮತಿ ಸಂಗೀತ ಕಟ್ಟಿಮನಿ (2014), "ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಯಲ್ಲಿ 371(ಜೆ) ಸಮನ್ವಯ ಪ್ರಗತಿ" (ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ.)
3. M.Laxmikanth, (2005), Public Administration.
4. M.Laxmikanth, (2008), "Indian Constitution" Tata McGraw–Hill Publication Company Ltd., New Delhi.
5. Kumari Anitha (2006), "Balanced Regional Development in India: Issues and Policies", (New Century Publications, New Delhi.)
6. ಭಾರತ ಸರ್ಕಾರದ 98ನೇ ಸಂವಿಧಾನ ತಿದ್ದುಪಡಿ 2012ರ ಗೆಜೆಟ್ 371 ಜೆ ತಿದ್ದುಪಡಿ ಕಾಯ್ದೆ
7. ಕರ್ನಾಟಕ ಸರ್ಕಾರದ 371 ಜೆ ಅನುಷ್ಠಾನದ ಸುತ್ತೋಲೆಗಳು
8. ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕದ ವರದಿ 2023–24
9. ಭಾರತ ಸರ್ಕಾರದ ಮಾನವ ಅಭಿವೃದ್ಧಿ ಸೂಚ್ಯಂಕ ವರದಿ 2023–24.
10. ಡಿ.ಎಂ.ನಂಜುಂಡಪ್ಪ ವರದಿ (2000–2002) ಗ್ರಂಥಾಲಯ ಸಮಿತಿ, ಸರ್ಕಾರಿ ಮುದ್ರಣಾಲಯ, ಕರ್ನಾಟಕ ವಿಧಾನಮಂಡಲ ಮತ್ತು ವಿಧಾನಸೌಧ, ಕರ್ನಾಟಕ ಸರ್ಕಾರ.
11. Economic Survey Report (2023–24), Planning Programme Monitoring and Statistics Development, M.S Building, Government Press, Govt. of Karnataka.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.